"ಮಧುರ ಮಕ್ಕಳೇ ಯಾವಾಗ ತಂದೆಯೊಂದಿಗೆ ಸತ್ಯ ಪ್ರೀತಿಯಿರುವುದೋ ಆಗಲೇ ನೆನಪಿನ ಎತ್ತರವಾದ ಏಣಿಯನ್ನು ಏರಲು ಸಾಧ್ಯ, ನೆನಪಿನ ಓಟದಿಂದಲೇ ವಿಜಯಮಾಲೆಯಲ್ಲಿ ಬರುತ್ತೀರಿ"

ಪ್ರಶ್ನೆ: ಒಬ್ಬ ತಂದೆಯೊಂದಿಗೆ ಸತ್ಯ ಪ್ರೀತಿಯಿದ್ದರೆ ಅವರ ಲಕ್ಷಣಗಳಲ್ಲಿ ಏನು ಕಂಡುಬರುತ್ತದೆ?

ಉತ್ತರ: ಒಂದುವೇಳೆ ಒಬ್ಬ ತಂದೆಯೊಂದಿಗೆ ಸತ್ಯಪ್ರೀತಿ ಇದ್ದರೆ ಹಳೆಯ ಪ್ರಪಂಚ, ಹಳೆಯ ಶರೀರದಿಂದ ಪ್ರೀತಿಯು ಸಮಾಪ್ತಿಯಾಗಿಬಿಡುವುದು. ಜೀವಿಸಿದ್ದಂತೆಯೇ ಸಾಯುವುದೇ ಪ್ರೀತಿಯ ಚಿಹ್ನೆಯಾಗಿದೆ. ತಂದೆಯ ವಿನಃ ಮತ್ತ್ಯಾರೊಂದಿಗೂ ಪ್ರೀತಿಯಿರಬಾರದು. ನಿಮ್ಮ ಬುದ್ಧಿಯಲ್ಲಿರಲಿ ಈಗ ಮನೆಗೆ ಹೋಗಬೇಕಾಗಿದೆ, ಇದು ನಮ್ಮ ಅಂತಿಮ ಜನ್ಮವಾಗಿದೆ ಎಂದು. ತಂದೆಯು ತಿಳಿಸುತ್ತಾರೆ- ಮಕ್ಕಳೇ, ನೀವು 84 ಜನ್ಮಗಳ ಆಟವನ್ನು ಪೂರ್ಣ ಮಾಡಿದಿರಿ, ಈಗ ಎಲ್ಲವನ್ನೂ ಮರೆತು ನನ್ನನ್ನು ನೆನಪು ಮಾಡಿ. ಆಗ ನಾನು ನಿಮ್ಮನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತೇನೆ.

ಗೀತೆ: ನನಗೆ ಆಶ್ರಯ ನೀಡುವವರು.........

ಓಂ ಶಾಂತಿ. ಮಧುರಾತಿ ಮಧುರ ಅಗಲಿಹೋಗಿ ಮರಳಿಸಿಕ್ಕಿರುವ ಮಕ್ಕಳು ಈ ಗೀತೆಯನ್ನು ಕೇಳಿದಿರಿ- ಇದು ಅಸತ್ಯ ಪ್ರಪಂಚವಾಗಿದೆ. ಭಾರತಕ್ಕೆ ಅಸತ್ಯ ಪ್ರಪಂಚವೆಂದು ಕರೆಯಲಾಗುವುದು. ಪ್ರತಿಯೊಬ್ಬರಿಗೆ ತಮ್ಮ-ತಮ್ಮ ಜನ್ಮಸ್ಥಳದ ಬಗ್ಗೆ ಕಾಳಜಿಯಿರುತ್ತದೆ. ಈಗ ಮಕ್ಕಳು ಹೇಳುತ್ತೀರಿ- ಈ ಅಸತ್ಯಖಂಡದೊಂದಿಗೆ ತಮ್ಮ ಯಾವುದೇ ಸಂಬಂಧವಿಲ್ಲ ಏಕೆಂದರೆ ಇದರಲ್ಲಂತೂ ಬಹಳ ದುಃಖವಿದೆ. ಈಗಂತೂ ಸುಖದ ಹೆಸರು-ಗುರುತೇ ಇಲ್ಲ. ಈಗ ಈ ಅಸತ್ಯಖಂಡದ ಆಯಸ್ಸು ಸ್ವಲ್ಪವೇ ಉಳಿದಿದೆ. ಇದು ಅಂತಿಮ ಜನ್ಮವಾಗಿದೆ. ಇದಕ್ಕೆ ಅಸತ್ಯಖಂಡ, ಮೃತ್ಯುಲೋಕವೆಂದು ಕರೆಯಲಾಗುತ್ತದೆ. ಅದು ಅಮರಲೋಕವಾಗಿದೆ. ಮೃತ್ಯುಲೋಕದಲ್ಲಿ ಕಾಲ ಅರ್ಥಾತ್ ಮೃತ್ಯುವು ತಿಂದುಬಿಡುತ್ತದೆ. ಮತ್ತೆ ಪುನರ್ಜನ್ಮವನ್ನೂ ಸಹ ಅಸತ್ಯ ಪ್ರಪಂಚದಲ್ಲಿಯೇ ತೆಗೆದುಕೊಳ್ಳುತ್ತಾರೆ. ಮಕ್ಕಳಿಗೆ ಗೊತ್ತಿದೆ- ನಾವು 84 ಜನ್ಮಗಳನ್ನು ಪೂರ್ಣ ಮಾಡಿದೆವು, ಈಗ ಈ ಪ್ರಪಂಚದೊಂದಿಗೆ ನಮ್ಮ ಸಂಬಂಧವಿಲ್ಲ. ಈಗ ನಿಮ್ಮ ಪ್ರೀತಿಯು ಒಬ್ಬ ತಂದೆಯೊಂದಿಗೆ ಜೋಡಣೆಯಾಗಿದೆ ಅಂದಮೇಲೆ ನಿಮಗೆ ಆಸ್ತಿಯು ಸಿಗುತ್ತದೆ. ಉಳಿದಂತೆ ಯಾದವರು, ಕೌರವರದು ವಿಪರೀತ ಬುದ್ಧಿಯಾಗಿದೆ ಅರ್ಥಾತ್ ಅವರು ತಂದೆಯನ್ನೇ ಅರಿತುಕೊಂಡಿಲ್ಲ. ಈಗ ನೀವು ಮಕ್ಕಳದು ಒಬ್ಬ ತಂದೆಯೊಂದಿಗೆ ಪ್ರೀತಿಬುದ್ಧಿಯಿದೆ. ತಂದೆಯು ತಿಳಿಸುತ್ತಾರೆ- ಗೃಹಸ್ಥ ವ್ಯವಹಾರದಲ್ಲಿ ಭಲೆ ಇರಿ. ತಂದೆಯನ್ನು ನೆನಪು ಮಾಡಿ. ಈಗ ಎಲ್ಲಾ ಪಾತ್ರಧಾರಿಗಳ ಪಾತ್ರವು ಪೂರ್ಣವಾಗುತ್ತದೆ. ಎಲ್ಲರೂ ಹಿಂತಿರುಗಿ ಮನೆಗೆ ಹೋಗಬೇಕಾಗಿದೆ. ಮನುಷ್ಯರು ಸಾಯಲು ಬಯಸುವುದಿಲ್ಲ ಆದರೆ ನೀವಂತೂ ಜೀವಿಸಿದ್ದಂತೆಯೇ ಸತ್ತಿದ್ದೀರಿ. ಈ ಪ್ರಪಂಚದಲ್ಲಿ ಯಾರೊಂದಿಗೂ ಪ್ರೀತಿಯಿಲ್ಲ. ಈ ಶರೀರದೊಂದಿಗೂ ಸಹ ಪ್ರೀತಿಯಿಲ್ಲ. ಆತ್ಮಕ್ಕೆ ಜ್ಞಾನ ಅಥವಾ ತಿಳುವಳಿಕೆ ಸಿಕ್ಕಿದೆ, ನಾವೀಗ ತಂದೆಯ ಮಕ್ಕಳಾಗಿದ್ದೇವೆ. ನಮ್ಮ 84 ಜನ್ಮಗಳು ಈಗ ಪೂರ್ಣವಾಯಿತು. ಈ ಆಟವು ಮುಕ್ತಾಯವಾಯಿತು, ನಾವೇ ದೇವತೆಗಳಾಗಿದ್ದೆವು, ನಂತರ ಕ್ಷತ್ರಿಯ, ವೈಶ್ಯ, ಶೂದ್ರರಾದೆವು. ಈಗ ನಾವೇ ಪುನಃ ಬ್ರಾಹ್ಮಣರಾಗಿದ್ದೇವೆ. ಈ ಚಕ್ರವನ್ನು ಪೂರ್ಣ ನೆನಪಿನಲ್ಲಿಟ್ಟುಕೊಳ್ಳಬೇಕಾಗಿದೆ. ಆತ್ಮವೇ ಹೇಳುತ್ತದೆ ಅವಶ್ಯವಾಗಿ ಪುನರ್ಜನ್ಮವನ್ನು ತೆಗೆದುಕೊಳ್ಳುತ್ತಾ-ತೆಗೆದುಕೊಳ್ಳುತ್ತಾ ಈಗ ಇದು ಅಂತಿಮ ಜನ್ಮವಾಗಿದೆ. ತಂದೆಯು ಕರೆದುಕೊಂಡು ಹೋಗಲು ಬಂದಿದ್ದಾರೆ. ಅನೇಕ ಬಾರಿ ತಾವು 84 ಜನ್ಮಗಳ ಚಕ್ರವನ್ನು ಸುತ್ತಿದ್ದೀರಿ. ಸ್ವದರ್ಶನ ಚಕ್ರಧಾರಿಗಳಾಗಿದ್ದೀರಲ್ಲವೆ. ತಿಳಿಸಲಾಗುತ್ತದೆ- ಈ ರೀತಿ ನಾವು 84 ಜನ್ಮಗಳ ಚಕ್ರವನ್ನು ಸುತ್ತಿದ್ದೇವೆ, ಎಲ್ಲಾ ಭಾರತವಾಸಿಗಳದು ಪೂರ್ಣ 84 ಜನ್ಮಗಳೆಂದು ಹೇಳುವುದಿಲ್ಲ. ಯಾರು ಬ್ರಾಹ್ಮಣರಾಗುತ್ತಾರೆಯೋ ಅವರೇ ತಿಳಿದುಕೊಳ್ಳುತ್ತಾರೆ. 5000 ವರ್ಷಗಳ ಹಿಂದೆಯೂ ಸಹ ತಿಳಿಸಿದ್ದರು- ಹೇ ಮಕ್ಕಳೇ, ನೀವು ತಮ್ಮ ಜನ್ಮಗಳನ್ನು ಅರಿತುಕೊಂಡಿಲ್ಲ. 84 ಲಕ್ಷ ಜನ್ಮಗಳೆಂದರೆ ಅದರ ವರ್ಣನೆಯನ್ನೂ ಸಹ ಯಾರೂ ಮಾಡಲು ಸಾಧ್ಯವಿಲ್ಲ.

ಈಗ ನಿಮಗೆ ಎಲ್ಲಾ ಧರ್ಮಗಳ ಚಕ್ರದ ಬಗ್ಗೆ ಗೊತ್ತಾಗಿದೆ. ಲೆಕ್ಕಾಚಾರಗಳಲ್ಲಿ ಯಾರು ಬುದ್ಧಿವಂತರಾಗಿರುತ್ತಾರೆ, ಅವಶ್ಯವಾಗಿ ಇಂತಹವರು ಇಷ್ಟು ಜನ್ಮಗಳನ್ನು ತೆಗೆದುಕೊಳ್ಳಬೇಕೆಂದು ಅವರು ತಕ್ಷಣ ಅರಿತುಕೊಳ್ಳುತ್ತಾರೆ. ನಿಮಗೂ ಸಹ ಪೂರ್ಣ ನಿಶ್ಚಯವಿದೆ- ನಾವು 84 ಜನ್ಮಗಳನ್ನು ಪೂರ್ಣ ಮಾಡಿದೆವು, ಈಗ ತಂದೆಯು ಹಿಂತಿರುಗಿ ಕರೆದುಕೊಂಡು ಹೋಗಲು ಬಂದಿದ್ದಾರೆ. ಇದಕ್ಕಾಗಿಯೇ ಈ ಮಹಾಭಾರತ ಯುದ್ಧವಿದೆ. ಅವರೆಲ್ಲರದೂ ವಿನಾಶಕಾಲದಲ್ಲಿ ವಿಪರೀತ ಬುದ್ಧಿಯಿದೆ. ವಿನಾಶ ಕಾರ್ಯವಾಗುವುದು ಕಲಿಯುಗದ ಅಂತ್ಯ ಮತ್ತು ಸತ್ಯಯುಗದ ಆದಿಯ ಸಂಗಮದಲ್ಲಿ. ಸತ್ಯಯುಗ ಮತ್ತು ತ್ರೇತಾದ ಸಂಗಮವನ್ನು ವಿನಾಶಕಾಲವೆಂದು ಹೇಳುವುದಿಲ್ಲ. ಅಲ್ಲಂತೂ ವೃದ್ಧಿಯನ್ನು ಹೊಂದುತ್ತಿರುತ್ತಾರೆ. ಈಗಂತೂ ಎಲ್ಲರದೂ ವಿನಾಶವಾಗಲಿದೆ, ಇದಕ್ಕೆ ವಿನಾಶಕಾಲವೆಂದು ಹೇಳಲಾಗುವುದು. ಈಗ ನಿಮ್ಮದು ಅಂತಿಮ ಜನ್ಮವಾಗಿದೆ. ತಂದೆಯು ಇದಕ್ಕಿಂತ ಮುಂಚೆಯೇ ಬಂದಿದ್ದರೆ ನಿಮ್ಮದು ಅಂತಿಮ ಜನ್ಮವೆಂದು ಹೇಳಲು ಸಾಧ್ಯವಾಗುತ್ತಿರಲಿಲ್ಲ. ಯಾವಾಗ ಆಟವು

ಪೂರ್ಣವಾಗುತ್ತದೆಯೋ ಆಗಲೇ ನಾನು ಬರುತ್ತೇನೆ. ನಿಮಗೆ ಗೊತ್ತಿದೆ- ಅವಶ್ಯವಾಗಿ ನಾವಾತ್ಮರು 84 ಜನ್ಮಗಳನ್ನು ತೆಗೆದುಕೊಳ್ಳುತ್ತೇವೆ. 21 ಕುಲದ ಉದ್ಧಾರ ಮಾಡುವವರೇ ಕುಮಾರಿಯೆಂದು ಗಾಯನ ಮಾಡಲಾಗುತ್ತದೆ. ಈಗ 21 ಕುಲವೆಂದು ಯಾವುದಕ್ಕೆ ಹೇಳಲಾಗುತ್ತದೆ ಎಂದು ಅವರಿಗೆ ಗೊತ್ತಿಲ್ಲ. ಭಾರತದಲ್ಲಿ ಕುಮಾರಿಯರಿಗೆ ಬಹಳ ಮಾನ್ಯತೆಯಿದೆ, ಪೂಜಿಸುತ್ತಾರೆ. ಜಗದಂಬೆಯೂ ಕುಮಾರಿಯಾಗಿದ್ದಾರಲ್ಲವೆ. ಕುಮಾರಿಗೆ ಜಗದಂಬೆ ಎಂದು ಹೇಳುವುದಕ್ಕೂ ಸಹ ಅರ್ಥವಿರಬೇಕಲ್ಲವೆ. ಜಗದಂಬೆ ಇದ್ದಾರೆಂದರೆ ಜಗತ್ಪಿತನೂ ಸಹ ಬೇಕು. ಜಗತ್ಪಿತನ ಜೊತೆ ತಾಯಿಯೂ ಬೇಕು. ಈ ರೀತಿಯಂತೂ ಅನೇಕ ಮಾತೆಯರಿದ್ದಾರೆ ಅವರಿಗೆ ಜಗನ್ಮಾತೆ ಎಂತಲೂ ಹೇಳುತ್ತಾರೆ. ಪತ್ರಿಕೆಗಳಲ್ಲಿಯೂ ಸಹ ಬಂದಿತ್ತು- ಯಾರೋ ಒಬ್ಬರು ಮಾತೆಗೆ ಜಗನ್ಮಾತೆ ಎಂದು ಬರೆದಿದ್ದರು. ಜಗತ್ತೆಂದರೆ ಇಡೀ ಸೃಷ್ಟಿ ಅಂದಾಗ ಜಗತ್ತಿನ ತಾಯಿಯು ಒಬ್ಬರಿರುವರೋ ಅಥವಾ 10-20 ಜನ ಇರುವರೋ! ರಚಯಿತ ತಂದೆಯೊಬ್ಬರೇ ಆಗಿದ್ದಾರೆ ಅಂದಾಗ ತಾಯಿಯೂ ಒಬ್ಬರೇ ಇರಬೇಕಲ್ಲವೆ. ಇಷ್ಟೊಂದು ಮಾತೆಯರೆಲ್ಲಾ ಜಗತ್ತಿನ ಮಾಲೀಕರಾಗಿದ್ದಾರೆ ಆದರೆ ಜಗತ್ತಿನ ಮಾತೆಯಂತೂ ಜಗದಂಬಾ ಒಬ್ಬರೇ ಆಗಿದ್ದಾರೆ ಅಂದಾಗ ಈಗ ನೀವು ಮಕ್ಕಳ ಪ್ರೀತಿಯು ಶಿವತಂದೆಯೊಬ್ಬರ ಜೊತೆಯಿದೆ. ನಿಮ್ಮಲ್ಲಿಯೂ ಸಹ ನಂಬರ್ವಾರ್ ಪುರುಷಾರ್ಥದನುಸಾರ ಇದ್ದಾರೆ, ಅವರ ಪೂರ್ಣ ಪ್ರೀತಿಯಿದೆ. ಪ್ರಿಯತಮೆಗೆ ಒಬ್ಬ ಪ್ರಿಯತಮನೊಂದಿಗೆ, ಮಕ್ಕಳಿಗೆ ಒಬ್ಬ ತಂದೆಯೊಂದಿಗೆ ಪ್ರೀತಿಯಿರಬೇಕು. ಮತ್ತೆಲ್ಲರಿಂದ ಪ್ರೀತಿಯನ್ನು ತೆಗೆಯಬೇಕಾಗುತ್ತದೆ, ನಷ್ಟಮೋಹಿಗಳಾಗಬೇಕಾಗಿದೆ. ಹಳೆಯ ಪ್ರಪಂಚದಿಂದ ಮೋಹ ನಷ್ಟವಾಗಬೇಕು. ಹೇಗೆ ಹಳೆಯ ಮನೆಯಿರುತ್ತದೆ, ತಂದೆಯು ಹೊಸದನ್ನಾಗಿ ಮಾಡುತ್ತಾರೆ. ಯಾವಾಗ ಹೊಸಮನೆಯು ತಯಾರಾಗಿಬಿಡುವುದೋ ಆಗ ಹಳೆಯದನ್ನು ಸಮಾಪ್ತಿ ಮಾಡಿಬಿಡುತ್ತಾರೆ. ತಂದೆಯು ತಿಳಿಸುತ್ತಾರೆ- ನಾನು ನಿಮಗಾಗಿ ಸ್ವರ್ಗ, ಹೊಸಪ್ರಪಂಚವನ್ನು ರಚಿಸುತ್ತೇನೆ. ಹೊಸಪ್ರಪಂಚದಲ್ಲಿ ಹೊಸದೆಹಲಿಯಿರುತ್ತದೆ. ಇದೇ ಜಮುನಾ ನದಿಯ ತೀರದಲ್ಲಿ ನೀವು ರಾಜ್ಯ ಮಾಡುತ್ತೀರಿ. ನಿಮಗೆ ಗೊತ್ತಿದೆ- ಭಕ್ತಿಯದು ಬಹಳ ದೊಡ್ಡ ವಿಸ್ತಾರವಿದೆ. ಜ್ಞಾನವಂತೂ ಒಂದು ಸೆಕೆಂಡಿನದ್ದಾಗಿದೆ. ಬೀಜವನ್ನು ಅರಿತುಕೊಂಡರೆ ಇಡೀ ವೃಕ್ಷವೇ ಬಂದುಬಿಡುತ್ತದೆ. ಭಿನ್ನ-ಭಿನ್ನ ಅನೇಕ ಧರ್ಮಗಳ ವೃಕ್ಷವಾಗಿದೆ. ಇದರಲ್ಲಿ ದೇವಿ-ದೇವತಾ ಧರ್ಮವು ಮುಖ್ಯ ತಳಪಾಯವಾಗಿದೆ. ಅರ್ಧಕಲ್ಪದಲ್ಲಿ ಒಂದು ಧರ್ಮದ ವಿನಃ ಮತ್ತ್ಯಾವುದೂ ಇರುವುದಿಲ್ಲ. ಇನ್ನು ಅರ್ಧ ಕಲ್ಪ ನೋಡಿ ಎಷ್ಟೊಂದು ಧರ್ಮಗಳ ಸ್ಥಾಪನೆಯಾಗುತ್ತದೆ. ಪರಮಪಿತ ಪರಮಾತ್ಮ ಬ್ರಹ್ಮಾರವರ ಮುಖಾಂತರ ದೇವತಾಧರ್ಮ ಮತ್ತು ಕ್ಷತ್ರಿಯ ಧರ್ಮದ ಸ್ಥಾಪನೆ ಮಾಡುತ್ತಾರೆಂದು ಹೇಳಲಾಗುತ್ತದೆ ಅಂದಾಗ ನೋಡುತ್ತೀರಿ- ಬ್ರಾಹ್ಮಣರಂತೂ ನೀವೇ ಆಗಿದ್ದೀರಿ. ನಿಮ್ಮಲ್ಲಿಯೂ ಕೆಲವರು ಸೂರ್ಯವಂಶಿ ಹಾಗು ಇನ್ನೂ ಕೆಲವರು ಚಂದ್ರವಂಶಿಯರಾಗುವವರಿದ್ದಾರೆ. ಬ್ರಾಹ್ಮಣ ಧರ್ಮವು ಶ್ರೇಷ್ಠಾತಿಶ್ರೇಷ್ಠ ಆಗಿದೆ. ಭಾರತವಾಸಿಗಳು ತಮ್ಮ ಧರ್ಮವನ್ನೇ ಅರಿತುಕೊಂಡಿಲ್ಲ. ಧರ್ಮವೇ ಶಕ್ತಿಯೆಂದು ಹೇಳಲಾಗುತ್ತದೆ. ಈಗ ತಂದೆಯು ಧರ್ಮಸ್ಥಾಪನೆ ಮಾಡುತ್ತಾರೆ ಅದರಿಂದ ನೀವು ತಂದೆಯ ಮಕ್ಕಳಾಗುವುದರಿಂದ ಎಷ್ಟೊಂದು ಶಕ್ತಿಗಳನ್ನು ಪಡೆಯುತ್ತೀರಿ ಅಂದರೆ ಸರ್ವಶಕ್ತಿವಂತ ತಂದೆಯು ಮಕ್ಕಳನ್ನು ಯೋಗದಿಂದ ಶಕ್ತಿಶಾಲಿಗಳನ್ನಾಗಿ ಮಾಡುತ್ತಾರೆ. ತಂದೆಯು ಎಷ್ಟೊಂದು ಗುಪ್ತವಾಗಿದ್ದಾರೆ. ಅವರಿಗೆ ತಮ್ಮ ಶರೀರವಿಲ್ಲ. ಸರ್ವಶಕ್ತಿವಂತನೆಂದು ಹೇಳಲಾಗುತ್ತದೆ ಅಂದಮೇಲೆ ಅವಶ್ಯವಾಗಿ ಶಕ್ತಿ ಕೊಡುವವರಲ್ಲವೆ. ನಿಮ್ಮ ಹೆಸರೇ ಆಗಿದೆ- ಶಿವಶಕ್ತಿಯರು. ಶಿವನಿಂದ ಶಕ್ತಿಯನ್ನು ಪಡೆಯುವವರಾಗಿದ್ದೀರಿ, ನರಕವನ್ನು ಸ್ವರ್ಗವನ್ನಾಗಿ ಮಾಡುತ್ತೀರಿ. ನಿಮಗೆ ಈ ಬಲ ಸಿಗುತ್ತದೆ. ಯೋಗಬಲದಿಂದ ನೀವು ರಾವಣನ ಮೇಲೆ ಜಯ ಪಡೆಯುತ್ತೀರಿ ಅಂದಾಗ ಈಗ ನಿಮ್ಮದು ಸರ್ವಶಕ್ತಿವಂತ ತಂದೆಯೊಂದಿಗೆ ಪ್ರೀತಿಯಿದೆ ನಂಬರ್ವಾರ್ ಪುರುಷಾರ್ಥದನುಸಾರ. ಅನೇಕರು ವಿಪರೀತ ಬುದ್ಧಿಯವರೂ ಇದ್ದಾರೆ ಏಕೆಂದರೆ ನೆನಪು ಮಾಡುವುದಿಲ್ಲ. ಯಾರು ಬಹಳ ನೆನಪು ಮಾಡುತ್ತಾರೆಯೋ ಅವರದು ತುಂಬಾ ಪ್ರೀತಿಬುದ್ಧಿಯಾಗಿದೆ. ತಂದೆಯೊಂದಿಗೆ ಕಡಿಮೆ ಪ್ರೀತಿಯಿದ್ದರೆ ಅವರು ನೆನಪು ಮಾಡುವುದಿಲ್ಲವೆಂದರೆ ಆಸ್ತಿಯು ಮತ್ತೆ ಹೇಗೆ ಸಿಗುತ್ತದೆ? ತಂದೆಯನ್ನು ಎಷ್ಟು ನೆನಪು ಮಾಡುತ್ತೀರೋ ಅಷ್ಟು ಶಕ್ತಿ ಸಿಗುತ್ತದೆ. ಶಿವತಂದೆಯನ್ನೂ ನೆನಪು ಮಾಡಿ ಮತ್ತು ಜೊತೆಜೊತೆಗೆ ಮುಖವನ್ನೂ ಸಹ ಕಪ್ಪು ಮಾಡಿಕೊಳ್ಳುತ್ತಾ ಇರುತ್ತೀರೆಂದರೆ ರಾಜ್ಯಭಾಗ್ಯವು ಸಿಗುತ್ತದೆ ಎಂದಲ್ಲ. ಬಾಬಾ, ನಾವು ಮರೆತುಹೋಗುತ್ತೇವೆ ಎಂದು ಹೇಳುತ್ತಾರೆ. ಅದಕ್ಕೆ ತಂದೆಯು ತಿಳಿಸುತ್ತಾರೆ- ಅರೆ, ನೀವು ಈಶ್ವರನ ಸಂತಾನರಾಗಿದ್ದೀರಿ, ನಿಮಗಂತೂ ಬಹಳ ನಶೆಯಿರಬೇಕು. ಇಂತಹ ತಂದೆಯನ್ನಂತೂ ನಿರಂತರ ನೆನಪು ಮಾಡಬೇಕು. ಪ್ರೀತಿಬುದ್ಧಿಯವರಾಗಬೇಕು. ಶಿವತಂದೆಯೊಂದಿಗೆ ಪ್ರೀತಿಯಿಲ್ಲವೆಂದರೆ ಬ್ರಹ್ಮಾರವರೊಂದಿಗೂ ಇರುವುದಿಲ್ಲ. ಅಂತಹವರು ಎಲ್ಲರೊಂದಿಗೆ ಜಗಳವಾಡುತ್ತಾ-ಹೊಡೆದಾಡುತ್ತಿರುತ್ತಾರೆ. ಯೋಗವೇ ಇಲ್ಲವೆಂದರೆ ಆಸ್ತಿಯನ್ನು ಹೇಗೆ ಪಡೆಯುತ್ತೀರಿ? ಈಶ್ವರನ ಪಕ್ಷಿ(ಬುಲ್-ಬುಲ್) ಆಗಲು ಸಾಧ್ಯವಿಲ್ಲ. ಜ್ಞಾನದ ಪಕ್ಷಿಗಳಾಗಬೇಕಲ್ಲವೆ. ತಂದೆಯ ಬಳಿ ಈಶ್ವರೀಯ ಪಕ್ಷಿಗಳೂ ಇದ್ದೀರಿ, ಮೈನಾಹಕ್ಕಿಗಳೂ ಇದ್ದೀರಿ, ಗಿಳಿಗಳೂ ಇದ್ದೀರಿ, ಇನ್ನೂ ಕೆಲವರು ಪಂಚರಂಗಿಗಳೂ ಇದ್ದೀರಿ. ಎಲ್ಲರೊಂದಿಗೆ ಜಗಳವಾಡುತ್ತಾ-ಹೊಡೆದಾಡುತ್ತಿರುತ್ತಾರೆ. ಕೆಲವರು ಪಾರಿವಾಳಗಳೂ ಆಗಿದ್ದಾರೆ ಅವರು ಶಬ್ಧ ಮಾಡುವುದಿಲ್ಲ. ತೋಟದಲ್ಲಿ ಭಿನ್ನ-ಭಿನ್ನ ಪ್ರಕಾರದ ಹೂಗಳಿರುತ್ತವೆ ಅಂದಾಗ ಪ್ರತಿಯೊಬ್ಬರೂ ತಮ್ಮೊಂದಿಗೆ ಕೇಳಿಕೊಳ್ಳಿ- ನಾನು ಯಾವ ಹೂವಾಗಿದ್ದೇನೆ? ಗುಲಾಬಿಯಾಗಿದ್ದೇನೆಯೇ ಅಥವಾ ಆತ್ಮಿಕ ಗುಲಾಬಿಯಾಗಿದ್ದೇನೆಯೇ? ನಾನು ಮಮ್ಮಾ-ಬಾಬಾರವರ ತರಹ ಸರ್ವೀಸ್ ಮಾಡುತ್ತೇನೆಯೇ? ನಾನು ಶ್ರೀನಾರಾಯಣ ಅಥವಾ ಶ್ರೀಲಕ್ಷ್ಮಿಯನ್ನು ವರಿಸಲು ಯೋಗ್ಯನಾಗಿದ್ದೇನೆಯೇ? ಹೀಗೆ ತಮ್ಮೊಂದಿಗೆ ಕೇಳಿಕೊಳ್ಳಬೇಕು - ನಾನು ತಂದೆಯನ್ನು ಎಷ್ಟು ನೆನಪು ಮಾಡುತ್ತೇನೆ? ಎಷ್ಟು ಸೇವೆಯನ್ನು ಮಾಡುತ್ತೇನೆ? ತಂದೆಯಿಂದಂತೂ ಅವಶ್ಯವಾಗಿ ಆಸ್ತಿಯು ಸಿಗಲಿದೆ. ನಿರಾಕಾರ ಪರಮಪಿತ ಪರಮಾತ್ಮ ಭಾರತದಲ್ಲಿ ಬಂದಿದ್ದಾರೆ ಅಂದಾಗ ಅವಶ್ಯವಾಗಿ ಭಾರತವನ್ನು ಸ್ವರ್ಗವನ್ನಾಗಿ ಮಾಡುತ್ತಾರಲ್ಲವೆ. ಅವಶ್ಯವಾಗಿ ಶಿವತಂದೆಯು ಬರುತ್ತಾರೆ ಆಗಲೇ ಸತ್ಯಯುಗವನ್ನು

ಸ್ಥಾಪಿಸುತ್ತಾರಲ್ಲವೆ. ಶಿವಜಯಂತಿಯನ್ನು ಆಚರಿಸುತ್ತಾರೆ, ಶಿವನ ಜನ್ಮಸ್ಥಾನವೂ ಆಗಿದೆ ಅಂದಮೇಲೆ ಕೃಷ್ಣನ ಜನ್ಮಸ್ಥಾನವೂ ಆಗಿದೆ. ಕೃಷ್ಣಜಯಂತಿಯನ್ನಂತೂ ಬಹಳ ವಿಜೃಂಭಣೆಯಿಂದ ಆಚರಿಸುತ್ತಾರೆ. ಈಗಂತೂ ಶಿವಜಯಂತಿಗೆ ರಜೆಯನ್ನೂ ಸಹ ಕೊಡುವುದಿಲ್ಲ. ಅಂಧಕಾರ ನಗರವಾಗಿದೆಯಲ್ಲವೆ. ಇಲ್ಲಿ ಪ್ರಜೆಗಳ ಮೇಲೆ ಪ್ರಜೆಗಳ ರಾಜ್ಯವಾಗಿದೆ. ರಾಜ-ರಾಣಿಯರ ರಾಜ್ಯವಿರಬೇಕು ಅದಂತೂ ನಾಟಕದನುಸಾರ ಇಲ್ಲವೇ ಇಲ್ಲ.

ನಿಮಗೆ ಗೊತ್ತಿದೆ- ಭಾರತವು ಪವಿತ್ರ ರಾಜಾಸ್ಥಾನವಾಗಿಬಿಡುವುದು ಅಂದಾಗ ಅವರನ್ನೂ ಸಹ ಏಳಿಸಬೇಕು ಪುನಃ ದೈವೀ ರಾಜಾಸ್ಥಾನವು ಸ್ಥಾಪನೆಯಾಗುತ್ತದೆ, ಈಗ ಅಸುರೀ ರಾಜಾಸ್ಥಾನವಾಗಿಬಿಟ್ಟಿದೆ. ಮೊದಲು ಭಾರತವಾಸಿಗಳು ಪವಿತ್ರವಾಗಿದ್ದರು, ಈಗಂತೂ ಅಪವಿತ್ರರಾಗಿದ್ದಾರೆ ಆದ್ದರಿಂದಲೇ ಪವಿತ್ರರ ಪೂಜೆ ಮಾಡುತ್ತಾರೆ. ಈಗಂತೂ ರಾಜಾಸ್ಥಾನವು ಇಲ್ಲ. ನೀವು ಪತ್ರ ಬರೆಯಬಹುದು ಅಥವಾ ಪತ್ರಿಕೆಯಲ್ಲಿಯೂ ಹಾಕಿಸಬಹುದು- ಭಾರತವು 5000 ವರ್ಷಗಳ ಮೊದಲು ದೈವೀ ರಾಜಾಸ್ಥಾನವಾಗಿತ್ತು, ಈಗಿಲ್ಲ. ನೀವು ಈಶ್ವರೀಯ ಸಹೋದರ-ಸಹೋದರಿಯರಾಗಿದ್ದೀರಿ. ಕೆಲವರಷ್ಟೇ ಇದ್ದೀರಿ. ಗಾಯನವೂ ಇದೆ- ರಾಮನೂ ಹೋದ, ರಾವಣನೂ ಹೋದ..... ತಿಳಿದುಕೊಳ್ಳಬೇಕು- ನಾವು ಬಾಕಿ ಸ್ವಲ್ಪ ಸಮಯವಷ್ಟೇ ಇರುತ್ತೇವೆ. ತಂದೆಯಿಂದಂತೂ ಆಸ್ತಿಯನ್ನು ಪಡೆದುಕೊಳ್ಳುತ್ತಾ ಇರಬೇಕು. ಜೊತೆಜೊತೆಗೆ ಭವಿಷ್ಯದ ಚಿಂತನೆಯನ್ನೂ ಮಾಡಿ, ಈ ವ್ಯವಹಾರವನ್ನೂ ಮಾಡಿ ತಮ್ಮ ಶರೀರ ನಿರ್ವಹಣೆಯನ್ನೂ ಮಾಡಬೇಕಾಗಿದೆ. ಇದು ಭವಿಷ್ಯಕ್ಕಾಗಿ ಇದೆ. ಇದರಲ್ಲಿ ಪರಿಶ್ರಮವೇನೂ ಇಲ್ಲ, ತುಂಬಾ ಸಹಜವಾಗಿದೆ. ಸೆಕೆಂಡಿನಲ್ಲಿ 21 ಜನ್ಮಗಳಿಗೆ ಜೀವನ್ಮುಕ್ತಿಯು ಸಿಗುತ್ತದೆ. ತಂದೆ ಮತ್ತು ಚಕ್ರವನ್ನು ನೆನಪು ಮಾಡಬೇಕಾಗಿದೆ. ತಂದೆಯನ್ನು ನೆನಪು ಮಾಡುವುದರಿಂದಲೇ ಪಾವನರಾಗುತ್ತೀರಿ, ಪತಿತರು ಯಾರೂ ಹೋಗಲು ಸಾಧ್ಯವಿಲ್ಲ. ಬಹಳ ಶಿಕ್ಷೆಗಳನ್ನು ಅನುಭವಿಸಬೇಕಾಗುತ್ತದೆ ಅಂದಾಗ ಈಗಲೇ ವಿನಾಶಕಾಲವಾಗಿದೆ. ಯಾದವರು ಮತ್ತು ಕೌರವರದು ವಿಪರೀತ ಬುದ್ಧಿಯಿದೆ. ಪಾಂಡವರದು ಪ್ರೀತಿಬುದ್ಧಿಯಿತ್ತು, ಅವರದೇ ವಿಜಯವಾಯಿತು. ಈಗ ಅದೇ ಸಮಯವಾಗಿದೆ. ತಂದೆಯು ತಿಳಿಸುತ್ತಾರೆ- ಕೇವಲ ಇದನ್ನು ನೆನಪು ಮಾಡಿ, ಈಗ ಹಿಂತಿರುಗಿ ಹೋಗಬೇಕಾಗಿದೆ ಇನ್ನು ಸ್ವಲ್ಪ ಸಮಯವಷ್ಟೇ ಇದೆ, ನಾಟಕವು ಪೂರ್ಣವಾಗುತ್ತದೆ. ಗೃಹಸ್ಥ ವ್ಯವಹಾರದಲ್ಲಿರುತ್ತಾ ಕೇವಲ ತಂದೆಯನ್ನು ನೆನಪು ಮಾಡಬೇಕಾಗಿದೆ. ನೆನಪಿನದೇ ಎತ್ತರವಾದ ಏಣಿಯಾಗಿದೆ. ರುದ್ರಮಾಲೆಯಾಗಲಿದೆ ನಂತರ ಪಾರಿತೋಷಕವು ಸಿಗುವುದು. ರಾಜ್ಯಭಾಗ್ಯವನ್ನು ಪಡೆಯಬೇಕು, ಅದಕ್ಕಾಗಿ ವಿಚಾರಸಾಗರ ಮಂಥನ ಮಾಡಬೇಕು. ಇದು ಬುದ್ಧಿಯೋಗದ ಯಾತ್ರೆಯಾಗಿದೆ. ತಂದೆಯ ಬಳಿಗೆ ಹೋಗಬೇಕಾಗಿದೆ. ಇಡೀ ದಿನದಲ್ಲಿ ತಂದೆಯನ್ನು ಎಷ್ಟು ನೆನಪು ಮಾಡಿದೆವು? ಎಷ್ಟು ಜನರನ್ನು ಮುಳ್ಳುಗಳಿಂದ ಹೂಗಳನ್ನಾಗಿ ಮಾಡಿದೆವೆಂದು ನೋಡಿಕೊಳ್ಳಬೇಕು. ಪ್ರಜೆಗಳನ್ನು ಮಾಡಿಕೊಳ್ಳಲಿಲ್ಲವೆಂದರೆ ಯಾರ ಮೇಲೆ ರಾಜ್ಯ ಮಾಡುತ್ತೀರಿ ಆದ್ದರಿಂದ ಮೊದಲು ಮುಖ್ಯವಾಗಿ ಅಷ್ಟರತ್ನಗಳಾಗುತ್ತಾರೆ ನಂತರ 108, ನಂತರ 16,108 ಆಗಿಬಿಡುತ್ತಾರೆ. ವಿವೇಕವೂ ಹೇಳುತ್ತದೆ- ಇದಂತೂ ಅವಶ್ಯವಾಗಿದೆ, ವೃದ್ಧಿಯಂತೂ ಆಗುತ್ತಲೇ ಇರುತ್ತದೆ. ರಾಜಧಾನಿಯು ವೃದ್ಧಿಯನ್ನು ಪಡೆಯುತ್ತಾ ಇರುವುದು. ಈಗಂತೂ ಲಕ್ಷಾಂತರ ಜನ ಬರುತ್ತಾರೆ. ಬುದ್ಧಿಯಲ್ಲಿ ಇದನ್ನು ಪಕ್ಕಾ ನೆನಪಿಟ್ಟುಕೊಳ್ಳಬೇಕು- ನಾವೀಗ ಮನೆಗೆ ಹೋಗಬೇಕು. ಈ ಹಳೆಯ ಪ್ರಪಂಚದಲ್ಲಿ ಬಹಳ ದುಃಖವಿದೆ ಅಂದಾಗ ಒಬ್ಬ ತಂದೆಯನ್ನು ನೆನಪು ಮಾಡುತ್ತಾ ಇರಿ. ಬಹಳ ದೀರ್ಘವಾದ ಯಾತ್ರೆಯಾಗಿದೆ. ಅಂತ್ಯದಲ್ಲಿ ಬರುವವರು ಇಷ್ಟು ಶ್ರೇಷ್ಠಪದವಿಯನ್ನು ಪಡೆಯಲು ಸಾಧ್ಯವಿಲ್ಲ. ಎಷ್ಟೊಂದು ಪರಿಶ್ರಮ ಪಡಬೇಕಾಗುತ್ತದೆ! ಎಷ್ಟೊಂದು ಕರ್ಮಭೋಗವನ್ನು ತೀರಿಸಬೇಕಾಗುತ್ತದೆ! ನಂತರ ಅಂತ್ಯದಲ್ಲಿ ಬರುವವರು ಅವರ ವಿಕರ್ಮ ವಿನಾಶ ಮಾಡಿಕೊಳ್ಳಲು ಇಷ್ಟೊಂದು ಪರಿಶ್ರಮಪಡಲು ಹೇಗೆ ಸಾಧ್ಯ! ಜನಕನೂ ಸಹ ತ್ರೇತಾದಲ್ಲಿ ಹೋದನು. ಸೂರ್ಯವಂಶಿ ರಾಜನಾಗಲು ಸಾಧ್ಯವಿಲ್ಲ. ರಾಜರಾಗಿದ್ದರೂ, ಸಮರ್ಪಣೆಯೂ ಸಹ ಆಗಿತ್ತು ಆದರೆ ಟೂಲೇಟ್ ಆಗಿ ಬಂದಾಗ ಚಂದ್ರವಂಶಿದಲ್ಲಿ ಹೋದರು. ಈ ಮಾತುಗಳು ಬ್ರಾಹ್ಮಣರಿಗೇ ತಿಳಿಯಲು ಸಾಧ್ಯವಾಗುತ್ತದೆ, ಶೂದ್ರರು ತಿಳಿದುಕೊಳ್ಳಲು ಸಾಧ್ಯವಿಲ್ಲ. ಹಾ! ಕೆಲವರು ಪವಿತ್ರತೆ ಚೆನ್ನಾಗಿರುತ್ತದೆ ಆದರೆ ಪವಿತ್ರರಾಗಿದ್ದು ತೋರಿಸಬೇಕಲ್ಲವೆ. ಸನ್ಯಾಸಿಗಳ ಅನುಯಾಯಿಗಳೆಂದು ಕರೆಯಲಾಗುತ್ತದೆ, ಆದರೆ ತಾವೇ ಪವಿತ್ರರಾಗಿಲ್ಲವೆಂದರೆ ಅನುಯಾಯಿಗಳು ಹೇಗಾದರು? ಇದೂ ಸಹ ಅಸತ್ಯವಾಯಿತಲ್ಲವೆ. ಯಾವುದೇ ಸತ್ಸಂಗದಲ್ಲಿ ಗುರಿ-ಉದ್ದೇಶವಿರುವುದಿಲ್ಲ. ಎಷ್ಟೊಂದು ಸತ್ಸಂಗಗಳಿವೆ ಆದರೆ ಇಲ್ಲಿ ತಂದೆಯೇ ಬಂದು ಮನುಷ್ಯರಿಂದ ದೇವತೆಗಳನ್ನಾಗಿ ಮಾಡುತ್ತಾರೆ. ಒಬ್ಬ ತಂದೆಯ ನೆನಪಿನಿಂದ ನೀವು ವಿಶ್ವದ ಮಾಲೀಕರಾಗುತ್ತೀರಿ. ನೀವು ತಂದೆಯನ್ನು ನೆನಪೇ ಮಾಡಲಿಲ್ಲವೆಂದರೆ ಆಸ್ತಿಯು ಹೇಗೆ ಸಿಗುವುದು? ಪುರುಷಾರ್ಥ ಮಾಡಿ ನಿರಂತರ ನೆನಪು ಮಾಡುವುದು ನಿಮ್ಮ ಕೆಲಸವಾಗಿದೆ. ಹೀಗಲ್ಲಾ, ನಿರಂತರ ನೆನಪಿನಲ್ಲಿರುವ ಸ್ಥಿತಿಯು ಅಂತ್ಯದಲ್ಲಿ ಇರುವುದುಯೇ ಎಂದು. ಅಂತ್ಯದಲ್ಲಿ ಎಂಟು ಜನ ಮಾತ್ರವೇ ವಿಜಯಿಗಳಾಗುತ್ತಾರೆ. ನೆನಪು ಮಾಡುತ್ತಾ-ಮಾಡುತ್ತಾ ಎಲ್ಲರಿಗಿಂತ ಮೊದಲು ಹೋಗುತ್ತಾರೆ. ಒಳ್ಳೆಯದು!

ಮಧುರಾತಿ ಮಧುರ ಅಗಲಿಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ವಿನಾಶಕಾಲದ ಸಮಯವಾಗಿದೆ ಆದ್ದರಿಂದ ದೇಹಧಾರಿಗಳಿಂದ ಪ್ರೀತಿಯನ್ನು ತೆಗೆದು ಒಬ್ಬ ತಂದೆಯೊಂದಿಗೆ ಸತ್ಯ ಪ್ರೀತಿಯನ್ನು ಇಟ್ಟುಕೊಳ್ಳಬೇಕಾಗಿದೆ. ಈ ಹಳೆಯ ಮನೆಯಿಂದ ಮೋಹ ನಷ್ಟ ಮಾಡಿಕೊಳ್ಳಬೇಕಾಗಿದೆ.

2. ಜ್ಞಾನದ ಬುಲ್ ಬುಲ್ ಹಕ್ಕಿಗಳಾಗಿ ಮುಳ್ಳುಗಳನ್ನು ತಮ್ಮ ಸಮಾನ ಹೂಗಳನ್ನಾಗಿ ಮಾಡುವ ಸೇವೆ ಮಾಡಬೇಕಾಗಿದೆ. ನೆನಪಿನ ಓಟ ಓಡಬೇಕಾಗಿದೆ.

ವರದಾನ: ಸರ್ವ ಯೋಗ್ಯತೆಯ ಮೂಲಕ ಸ್ವಯಂನ್ನು ವ್ಯಾಲ್ಯುಯೆಬಲ್ ಆಗಿ ಮಾಡುವಂತಹ ನಿಶ್ಚಿಂತ ಚಕ್ರವರ್ತಿ ಭವ.

ತಂದೆ ಸ್ವಯಂ ಮಕ್ಕಳಿಗೆ ಆಫರ್ ಮಾಡುತ್ತಾರೆ - ಮಕ್ಕಳೇ ಯೋಗ್ಯ ರೈಟ್ ಹ್ಯಾಂಡ್ ಆಗಿ, ಯೋಗ್ಯ ಸೇವಾಧಾರಿ ಆಗಿ. ಯಾರು ಯೋಗ್ಯರಾಗಿರುತ್ತಾರೆ ಅವರು ಬೇಫಿಗರ್ ಬಾದ್ಷಾಹ ಆಗುತ್ತಾರೆ. ಇಲ್ಲಾ ಸ್ಥೂಲ ಯೋಗ್ಯತೆ, ಇಲ್ಲಾ ಜ್ಞಾನದ ಯೋಗ್ಯತೆ ಮನುಷ್ಯನನ್ನು ವ್ಯಾಲ್ಯುಯೆಬಲ್ ಆಗಿ ಮಾಡುವುದು. ಯೋಗ್ಯತೆ ಇಲ್ಲದಿದ್ದರೆ ಬೆಲೆಯಿರುವುದಿಲ್ಲ. ಆತ್ಮೀಯ ಸೇವೆಯ ಯೋಗ್ಯತೆ ಎಲ್ಲಕ್ಕಿಂತಲೂ ದೊಡ್ಡದಾಗಿದೆ. ಇಂತಹ ಯೋಗ್ಯ ಆತ್ಮವನ್ನು ಯಾವುದೇ ಮಾತು ತಡೆಯಲು ಸಾಧ್ಯವಿಲ್ಲ. ಯೋಗ್ಯರಾಗುವುದು ಅಂದರೆ ನನ್ನವರು ಕೇವಲ ಒಬ್ಬ ಬಾಬಾ, ಅಷ್ಟೇ ಬೇರೆ ಯಾವುದೇ ಮಾತು ಬುದ್ಧಿಯಲ್ಲಿ ಇಲ್ಲದಿರಲಿ.

ಸ್ಲೋಗನ್: ಏಕರಸ ಸ್ಥಿತಿಯ ಅನುಭವ ಮಾಡಬೇಕಾದರೆ ಒಬ್ಬ ತಂದೆಯ ಮೂಲಕ ಸರ್ವ ರಸಗಳ ಅನುಭೂತಿ ಮಾಡಿ.